# ಪ್ರಶ್ನೋತ್ತರ!

ಇಬ್ಬರು ಪರಿಚಿತರು ಮೂಲತಃ ಮಳ್ಳರು. ಬಹಳ ವರ್ಷಗಳಾದ ಮೇಲೆ ಎದುರುಬದುರಾಗಿ ಸಿಕ್ಕಿದರು. ಕುಶಲೋಪರಿಯ ಮಾತುಗಳಾದ ಮೇಲೆ ಒಬ್ಬ ಕೇಳಿದ 'ನಿನ್ನ ಮನೆ ಎಲ್ಲಿದೆ?' ಅಂತ.

ಇನ್ನೊಬ್ಬ ಹೇಳಿದ 'ಅಲ್ಲಿ ನೋಡು, ಎದುರು ಕಾಣ್ತಿದೆಯಲ್ಲ ದೊಡ್ಡ ಕಟ್ಟಡ ಅದರ ಪಕ್ಕದಲ್ಲಿ ಹಾಸಿ ಮುಂದಕ್ಕೆ ಬಂದ್ರೆ ಅಲ್ಲೊಂದು ಈಶ್ವರನ ದೇವಸ್ಥಾನ ಇದೆಯಲ್ಲ, ಅದರ ಎದುರು ರಸ್ತೆಯಲ್ಲಿ ನೇರವಾಗಿ ಬಂದು ಕೊನೆ ಕ್ರಾಸ್‌ನಲ್ಲಿ ಎಡಕ್ಕೆ ತಿರುಗಿ ಸುಮಾರು ಒಂದು ಕಿಲೊಮೀಟರ್ ನಡೆದರೆ ಅಲ್ಲೊಂದು ತಾಜಾ ಹಣ್ಣಿನ ಅಂಗಡಿ ಸಿಗುತ್ತಲ್ಲ, ಅದರ ಪಕ್ಕದ ರಸ್ತೆಲಿ ಮೂರು ಕ್ರಾಸ್ ದಾಟಿ ನಾಲ್ಕನೆಯ ಕ್ರಾಸಿಗೆ ಬಂದು ಯಾರನ್ನು ಕೇಳ್ಬೇಡಿ. ನಿಮ್ಮ ಎದುರಿಗೆ ಒಂದು ಪಾಳು ಮನೆ ಸಿಕ್ಕೇ ಸಿಗುತ್ತಲ್ಲ ಅದರ ಮೇಲೆ ಹತ್ತಿ ನಿಂತ್ಕೊಂಡು ನೋಡಿದ್ರೆ, ಬಲಭಾಗದಲ್ಲಿ ಒಂದು ದೊಡ್ಡ ಅರಳಿಮರ ಇದೆಯಲ್ಲ, ಅದರ ಪಕ್ಕದಲ್ಲಿ ಒಂದು ದೊಡ್ಡ ಕೋತಿ ಆಂಜನೇಯನ ಗುಡಿ ಇದೆಯಲ್ಲ, ಆ ಗುಡಿ ಪೂಜಾರಿ ಬೆಳಗಿನ ಪೂಜೆ ಮುಗಿಸಿ ಹೊರಟಾಗ, ಅವನನ್ನೇ ಹಿಂಬಾಲಿಸಿ ನಡೆದ್ರೆ, ಅವನು ಇನ್ನೊಂದು ಗಣಪತಿ ಗುಡಿ ಹೊಕ್ಕು ಪೂಜೆ ಮಾಡಿ ಹೊರಡುವಾಗ, ಅವನನ್ನೇ ಹಿಂಬಾಲಿಸಿ ನಡೆದ್ರೆ, ಅವನೆಲ್ಲಿ ತನ್ನ ಎಡಕ್ಕೆ ತಿರುಗ್ತಾನೊ ಅದರ ಬಲಕ್ಕೆ ನೀವು ತಿರುಗಿ, ಸೀದ ಬಂದ್ರೆ, ಸಿಗೊ ಎಡವಿಬಿದ್ದ ಸಿದ್ದಪ್ಪನ ಗುಡಿ ಆರನೆಯ ರಸ್ತೆಯ ಮೂರನೆಯ ಮನೆಯ ಪಕ್ಕದ್ದಲ್ಲ ಪಕ್ಕದ್ದು ನಮ್ಮ ಮನೆ ಅಂದು, ಯಾವಾಗ ಬರ್ತೀಯ? ಅಂತ ಕೇಳಿದ.

ಎರಡನೆಯವನು ಹೇಳಿದ, ನಾಳೆ ಬೆಳಿಗ್ಗೆ ತಪ್ಪಿದರೆ ಮಧ್ಯಾಹ್ನ ಆಗದಿದ್ದರೆ ಸಂಜೆ ಬಿಡುವಾಗದಿದ್ದರೆ ರಾತ್ರಿ ಏನಾದರೂ ಕೆಲಸ ಬಿದ್ದರೆ ಮರುದಿನ ಬೆಳಿಗ್ಗೆ. ಏನಾದರೂ ಕೆಲಸ ಮುಂದುವರೆದು ಮಧ್ಯಾಹ್ನ ಬಿಡುವಾಗದೆ ಬಿಸಿಲು ಹೆಚ್ಚಾಗಿದ್ದರೆ ಸಂಜೆ, ಅವಕಾಶವಾಗದಿದ್ದರೆ ರಾತ್ರಿ ಬೆಳಗಿನ ದಿನ ಏನಾದರೂ ಅಡಚಣೆಯಾದರೆ ಆ ಮಾರನೆಯ ದಿನ ಅದಾಗದಿದ್ದರೆ ಮುನ್ನಿನ ದಿನ. ಕೆಲಸ ಬಿದ್ದರೆ ಬರುವ ಮುಂದಿನ ವಾರ ಅಕಸ್ಮಾತ್ ಯಾರಾದರೂ ತುರ್ತಾಗಿ ಮನೆಗೆ ಬಂದರೆ ಮುಂದಿನ ತಿಂಗಳು ಸಾಧ್ಯವಾಗದಿದ್ದರೆ ಮೂರನೆಯ ತಿಂಗಳು. ಕೆಲಸದ ಒತ್ತಡವೇನಾದರೂ ಇದ್ದರೆ ಆರನೆಯ ತಿಂಗಳು ಕಾರ್ಯ ಜಾಸ್ತಿಯಾದರೆ ಅದಾದ ಆರು ತಿಂಗಳಿಗೆ ಯಾವುದೇ ತೊಂದರೆ ಇಲ್ಲದಿದ್ದರೆ ಮುಂದಿನ ವರ್ಷ ಇಲ್ಲ ಆ ಮುಂದಿನ ವರ್ಷ ಬಿಡುವಾದರೆ ನಿನ್ನಲ್ಲಿಗೆ ಬಂದೇ ಬರುತ್ತೇನೆ ಅಂದ. ಆ ಬಳಿಕ ಇಬ್ಬರು ಪರಿಚಿತರು ಒಬ್ಬರಿಗೊಬ್ಬರು ಬೆನ್ನು ಮಾಡಿಕೊಂಡು ಹೋದವರು ಇದುವರೆವಿಗೂ ಭೇಟಿಯಾಗಿಲ್ಲ. ಆಗುತ್ತಾರೊ ಇಲ್ಲವೊ ಈಗಲೆ ಹೇಗೆ ಹೇಳುವುದು?







**ಎಂ. ಅದ್ವಿತಾ ರಾವ್**
10ನೇ ತರಗತಿ, ಫ್ರೀಡಂ ಇಂಟರ್‌ನ್ಯಾಷನಲ್ ಸ್ಕೂಲ್, ಬೆಂಗಳೂರು



**ಅನುಷಾ ಎನ್.ಪಿ.**
6ನೇ ತರಗತಿ, ಫ್ಲಾರೆನ್ಸ್ ಹೈಸ್ಕೂಲ್ ಬೆಂಗಳೂರು

